ಬೈಂದೂರು ಪಟ್ಟಣದ ನೀರು ಸರಬರಾಜು ಯೋಜನೆಯ ಬಗ್ಗೆ

೧೧೧೩. **ಶ್ರೀ ಜಿ. ಎಸ್. ಆಚಾರ್** (ಬೈಂದೂರು).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಗೆ ನಲ್ಲಿ ನೀರು ಯೋಜನೆ ಮಂಜೂರು ಮಾಡಿ ೧೯೮೬-೮೭ ರಲ್ಲಿ ಕಾರ್ಯಾರಂಭ ಮಾಡಲಾಗುವುದೆಂದು ಕಳೆದ ವರ್ಷವೇ ವಾಗ್ದಾನವಿತ್ತಿದ್ದರೂ ಇನ್ನೂ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಆ) ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿರುವ ಈ ಪುರಸಭೆಗೆ ಕಾಮಗಾರಿ ಮಂಜೂರಾತಿಯನ್ನು ಯಾವಾಗ ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.— ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಗೆ ನಲ್ಲಿ ನೀರು ಸರಬರಾಜು ಯೋಜನೆಗೆ ಕಳೆದ ವರ್ಷವೇ ಮಂಜೂರಾತಿಯನ್ನು ಇತ್ತು ೧೯೮೬—೮೭ ರಲ್ಲಿ ಕೈಗೆ ತೆಗೆದುಕೊಳ್ಳಲಾಗುತ್ತದೆಂದು ವಾಗ್ದಾನವನ್ನು ಕೊಟ್ಟಿದ್ದರು. ಆದ್ದರಿಂದ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕಾರ್ಯರಂಭ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ಹಣದ ಒಂದು ತೊಂದರೆಯೇ ಮಂಜೂರಿಯಾಗಲಿಕ್ಕೆ ಕಾರಣವಾಗಿರುತ್ತದೆ. ೧೯೮೫ ರಲ್ಲಿ ೧೧.೫೦ ಲಕ್ಷ ಇದ್ದದ್ದು ಈಗ ಪರಿಷ್ಕರಣ ಮಾಡಿದಮೇಲೆ ೨೧ ಲಕ್ಷಕ್ಕೆ ಹೋಗಿದೆ. ಮಾನ್ಯ ಸದಸ್ಯರು ಹೇಳಿದಹಾಗೆ ನೀರನ್ನು ಒದಗಿಸತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಈಗ ೧೪ ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಿಗೆ ಸರ್ಕಾರವೇ ಹಣವನ್ನು ಒದಗಿಸಿ ಕುಡಿಯುವ ನೀರನ್ನು ಒದಗಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತದೆ. ಹಣದ ತೊಂದರೆಯಿರುವುದರಿಂದ ಸ್ವಲ್ಪ ನಿಧಾನವಾಗುತ್ತಿದೆ. ಆದರೆ ಸನ್ಮಾನ್ಯ ಆಚಾರ್ಯರವರಿಗೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಹುಡ್ಕೋದಿಂದ ಹಣವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲಿಂದ ಹಣವೇನಾದರೂ ಸಿಕ್ಕಿದರೆ, ಅವರು ಕೊಡತಕ್ಕಂಥ ಹಣವನ್ನು ಸೇರಿಸಿಕೊಂಡು ಈ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ.

ಧಾರವಾಡ ಜಿಲ್ಲೆಯಲ್ಲಿರುವ ಬಯೋಗ್ಯಾಸ್ ಪ್ಲಾಂಟುಗಳು.

೧೧೮೪. **ಶ್ರೀ ಸಿ. ಎಂ ಉದಾಸಿ.** (ಹಾನಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮಂತ್ರಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಧಾರವಾಡ ಜಿಲ್ಲೆಯಲ್ಲಿ ೧೯೮೫-೮೬ನೇ ಸಾಲಿನಿಂದ ತಯಾರಾದ ಬಯೋಗ್ಯಾಸ್ ಪ್ಲಾಂಟುಗಳು ಎಷ್ಟು ?

(ಆ) ಅವುಗಳಲ್ಲಿ ಪ್ರತಿ ವರ್ಷ ರೈತರಿಗೆ ಇಲಾಖೆಯಿಂದ ತಯಾರುಮಾಡಿಕೊಟ್ಟ ಬಯೋಗ್ಯಾಸ್ ಪ್ಲಾಂಟ್‌ಗಳೆಷ್ಟು ?

(ಇ) ಅವುಗಳಲ್ಲಿ ವಿಫಲವಾದವುಗಳೆಷ್ಟು ? ಮತ್ತು ಅವುಗಳನ್ನು ಸರಿಪಡಿಸಲಾಗಿದೆಯೇ